ದಿನಾಂಕ: ಫೆಬ್ರವರಿ 20, 2014

# ತಪ್ಪು ಗ್ರಹಿಕೆಯ ಅನುಕಂಪ

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಕಳೆದ ಕೆಲವು ದಶಕಗಳಲ್ಲಿ ಹಲವಾರು ರಾಷ್ಟ್ರಗಳು ಮೃತ್ಯು ದಂಡವನ್ನು ಬಹಿಷ್ಕರಿಸುವ ಹಾದಿಯಲ್ಲಿ ಸಾಗಿವೆ. ಭಾರತದ ಕೆಲ ಸಜ್ಜನರು ಈ ಬೇಡಿಕೆಯನ್ನು ಮಂಡಿಸಿದ್ದಾರೆ. ಆದರೆ, ಇತ್ತೀಚೆಗೆ ಹೆಚ್ಚುತ್ತಿರುವ ಭಯೋತ್ಪಾದಕ ಘಟನೆಗಳನ್ನು ನೋಡಿದಾಗ ಸಜ್ಜನರ ಅಭಿಪ್ರಾಯಕ್ಕೆ ಭಿನ್ನ ಮನಸ್ಥಿತಿಯನ್ನು ನಾನು ಬೆಳೆಸಿಕೊಂಡಿದ್ದೇನೆ. ಭಯೋತ್ಪಾದನಾ ಕೃತ್ಯಗಳಿಂದ ಜರ್ಜರಿತ ದೇಶ ಮೃತ್ಯು ದಂಡವನ್ನು ನಿಷೇಧಿಸಲು ಸಾಧ್ಯವೆ? ಭಾರತದಲ್ಲಿ ಭಯೋತ್ಪಾದನಾ ಗತಿವಿಧಿಗಳು ಹೆಚ್ಚಿರುವುದರಿಂದಲೇ ನಿಷೇಧದ ದಾರಿಯನ್ನು ನಾವು ತುಳಿಯಲಾಗದು. ಆದರೂ, ಸರ್ವೋಚ್ಚ ನ್ಯಾಯಾಲಯವು ಮೃತ್ಯು ದಂಡವನ್ನು ಅತಿ ವಿರಳವಾದ ಪ್ರಕರಣಗಳಿಗೆ ಮಾತ್ರ ನೀಡುವ ವಾಡಿಕೆ ಇಟ್ಟುಕೊಂಡಿದೆ.

ಮೃತ್ಯು ದಂಡವನ್ನು ಕಟ್ಟಕಡೆ ದಂಡವಾಗಿ ಪರಿಗಣಿಸಲಾಗಿದ್ದು, ವಿರಳ ಮತ್ತು ಭೀಕರ ಅಪರಾಧಗಳಿಗೆ ಮಾತ್ರ ಅದನ್ನು ಶಿಕ್ಷೆಯಾಗಿ ನೀಡಲಾಗುತ್ತದೆ. ಮೃತ್ಯುದಂಡವನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬ ಮಾಡಿದಲ್ಲಿ, ಶಿಕ್ಷೆಯನ್ನು ಹ್ರಸ್ವಗೊಳಿಸಿದಂತಾಗುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಇತ್ತೀಚಿಗಷ್ಟೆ ಅಭಿಪ್ರಾಯ ವ್ಯಕ್ತಪಡಿಸಿದೆ. ಕ್ಷಮಾದಾನ ಅರ್ಜಿಗಳ ಇತ್ಯರ್ಥಕ್ಕೆ ಗೃಹ ವ್ಯವಹಾರಗಳ ಸಚಿವಾಲಯ ವಿಳಂಬ ಮಾಡುತ್ತದೆ, ರಾಜ್ಯ ಸರ್ಕಾರಗಳು ತಮ್ಮ ಅಭಿಪ್ರಾಯ ತಿಳಿಸಲು ಮತ್ತು ರಾಷ್ಟ್ರಪತಿಗಳು ತಮ್ಮ ಸಲಹೆ ನೀಡುವಲ್ಲಿಯೂ ವಿಳಂಬವಾಗುತ್ತಿದೆ. ಈ ವಿಳಂಬದಿಂದಾಗಿ ಮೃತ್ಯು ದಂಡ ಎದುರಿಸುತ್ತಿದ್ದ ಹಲವರಿಗೆ ಶಿಕ್ಷೆ ತಗ್ಗಿಸಲಾಗಿದೆ. ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರ ಕೊಲೆಪಾತಕಿಯರಿಗೆ ಪರಿಹಾರ ನೀಡಿರುವ ಇತ್ತೀಚಿನ ಬೆಳವಣಿಗೆ ನೀತಿ ತತ್ವಗಳ ಪರಿಧಿಯನ್ನು ಮೀರಿದೆ. ದೇಶದ ಮಾಜಿ ಪ್ರಧಾನ ಮಂತ್ರಿಯನ್ನು ಕೊಲೆಮಾಡಿದವರಿಗೆ ಸಾಂಸ್ಥಿಕ ಕ್ಷಮಾದಾನ ನೀಡುವ ಪ್ರಸಂಗ ನನ್ನ ವಿವೇಕಕ್ಕೆ ನಿಲುಕದ ವಿಷಯವಾಗಿದೆ. ಇಂಥಹ ಹೀನಾಯ ಅಪರಾಧ ಮಾಡಿದವರು ರಾಜಕೀಯ ಪಂಗಡದ ಪ್ರತೀಕ ಆಗಲಾರರು. ರಾಷ್ಟ್ರೀಯ ಭದ್ರತೆಗೆ ಇದಕ್ಕಿಂತ ಮಿಗಿಲಾದ ಪೆಟ್ಟು ನೀಡಲಾಗದು. ಭಯೋತ್ಪಾದನೆ ದೇಶದ ವಿರುದ್ಧ ನಡೆದ ಅಪರಾಧವಾಗಿದೆ. ಇಂತಹ ಕುಕೃತ್ಯ ತಡೆಯಲು ಕಠಿಣ ಶಿಕ್ಷೆ ಸಮರ್ಥನೀಯವಾಗಿದೆ.

✲✲✲✲✲